ಪಿ.ಡಬ್ಲ್ಯೂ.2. ಅಸಲು ದಾವಾ ಸಂಖ್ಯೆ. 165/2014

# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ಗುಬ್ಬಿ

ದಿನಾಂಕಃ-**15.04.2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- ಪ್ರತಿವಾದಿಗಳ ಪರ ವಕೀಲರಾದ ಶ್ರೀ.ಎಂ.ಜಿ.ಆರ್. ರವರಿಂದ

11. ನನ್ನ ಹೆಸರು ಸುಧಾಮಣಿ.ಎನ್.ಎಸ್ ಎಂದರೆ ಸರಿ. ಎನ್. ಎಂದರೆ ನಾಯಕನ ಘಟ್ಟ ಹಾಗೂ ಎಸ್ ಎಂದರೆ ಶಂಕರಪ್ಪ ಎಂದರೆ ಸರಿ. ನನ್ನ ತಂದೆಯ ಹೆಸರು ಶಂಕರಪ್ಪ, ತಾಯಿಯ ಹೆಸರು ಶಂಕರಮ್ಮ ಎಂದರೆ ಸರಿ. ನಿ.ಪಿ.8 ರಲ್ಲಿ ನನ್ನ ತಂದೆಯ ಹೆಸರು ಪ್ರಕಾಶ್ ಎಂದು ಹಾಗೂ ತಾಯಿಯ ಹೆಸರು ಪ್ರೇಮಾ ಎಂದು ತೋರಿಸಿದ್ದೇನೆ ಎಂದರೆ ಸರಿ. ನಾನು ವಾದಿ ಮೃತ ನಾಗರಾಜ್ ನೊಂದಿಗೆ ಎಂದೂ ಅಲ್ಲಗಳೆದ ದಾಂಪತ್ಯವನ್ನು ನಡೆಸಿಲ್ಲ ಎಂದರೆ ಸರಿಯಲ್ಲ. ಮೃತ ವಾದಿ ನಾಗರಾಜ್ ಗೂ ನನಗೂ ಯಾವುದೇ ರೀತಿಯ ದಾಂಪತ್ಯ ಸಂಬಂದ ಇಲ್ಲ ಎಂದರೆ ಸರಿಯಲ್ಲ. ದಿಃ12-08-2012 ರಂದು ನನಗು ಾ ಹಾಗೂ ಮೃತ ವಾದಿ ನಾಗರಾಜ್ ಗೂ ಮದುವೆಯಾಗಿಲ್ಲ ಎಂದರೆ ಸರಿಯಲ್ಲ.

12. ದಿಃ18-04-2020 ರಂದು ವಾದಿ ನಾಗರಾಜ್ ಮೃತ ಪಟ್ಟಿರುತ್ತಾರೆ. ಮೃತ ವಾದಿ ನಾಗರಾಜ್ ನ ಮರಣಪ್ರಮಾಣಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ.. ನಾನು ಸದರಿ ಮರಣಪ್ರಮಾಣಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.. ವಾದಿ ಮೃತ ನಾಗರಾಜ್ ಮೃತಪಟ್ಟ ಮೇಲೆ ವಕೀಲರು ನನಗೆ ದೂರವಾಣಿ ಕರೆ ಮಾಡಿ ಈ ದಾವೆಯ ಬಗ್ಗೆ ತಿಳಿಸಿದರು. ನಾನು ಮಧ್ಯಂತರ ಅರ್ಜಿ 13 ರಿಂದ 15 ಅನ್ನು ಯಾವ ದಿನಾಂಕ ಹಾಕಿದ್ದೇನೆ ಎಂದು ನನಗೆ ನೆನಪಿಲ್ಲ.

13. ನಾನು ಈಗ ಮಾರಶೆಟ್ಟಿಹಳ್ಳಿ ಗ್ರಾಮದಲ್ಲಿ ಗಿರೀಶ ಎನ್ನುವವರ ಜೊತೆ ಸಂಸಾರ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಗಿರೀಶ ನಾನೊಬ್ಬಳೇ ಇರುವುದರಿಂದ ಬಂದು ಹೋಗಿ ಮಾಡುತ್ತಾರೆ ಹೊರತು ನಾನು ಅವರ ಜೊತೆ ಸಂಸಾರ ಮಾಡುತ್ತಿಲ್ಲ. ನಾನು ಸದರಿ ಗಿರೀಶನನ್ನು ಮದುವೆಯಾಗಿ ಅವನ ಜೊತೆ ಬಾಳುವೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.9 ಮತ್ತು ನಿ.ಪಿ.10 ರಲ್ಲಿ

ನಾಗರಾಜ್ ಎಂ.ಪಿ. ಎಂದು ಇದೆ ಎಂದರೆ ಸರಿ. ಮೃತ ವಾದಿ ನಾಗರಾಜ್ ಬೇರೆ ನಿ.ಪಿ.9 ಮತ್ತು 10 ರಲ್ಲಿ ಕಾಣಿಸಿರುವ ಎಂ.ಪಿ.ನಾಗರಾಜ್ ಬೇರೆ ಎಂದರೆ ಸರಿಯಲ್ಲ. ಮೃತ ವಾದಿ ನಾಗರಾಜ್ ರವರೇ ಸದರಿ ಎಂ.ಪಿ.ನಾಗರಾಜ್ ಎಂದು ತೋರಿಸಲು ನಾನು ಬೇರೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಮೃತ ವಾದಿ ನಾಗರಾಜ್ ಗೆ ನಾನು ಕಾನೂನು ಬದ್ಧ ವಾರಸುದಾರಳಲ್ಲ ಹಾಗೂ ನಾನು ಅವರ ಜೊತೆ ಯಾವುದೇ ದಾಂಪತ್ಯ ನಡೆಸಿಲ್ಲ ಎಂದರೆ ಸರಿಯಲ್ಲ. ಮೃತ ವಾದಿ ನಾಗರಾಜ್ ಗೆ ಸಂಬಂದಪಟ್ಟ ಸ್ಥಿರಾಸ್ತಿಗಳ ಖಾತೆ ,ಪಹಣಿ ಪವತಿವಾರಸುಮೇರೆಗೆ ನನ್ನ ಹೆಸರಿಗೆ ಆಗಿಲ್ಲ ಎಂದರೆ ಸರಿ. ನಾನು ತಹಶೀಲದ್ದಾರ್ ರವರಿಗೆ ಪವತಿ ವಾರಸುಮೇರೆಗೆ ಖಾತೆ ಮಾಡಲು ಅರ್ಜಿಕೊಟ್ಟಿದ್ದು ಅದಕ್ಕೆ ಅವರು ಮೃತ ವಾದಿ ನಾಗರಾಜ್ ರವರ ವಾರಸುದಾರಳಲ್ಲ ಎಂದು ಹಿಂಬರಹ ನೀಡಿದ್ದಾರೆ ಎಂದರೆ ಸರಿಯಲ್ಲ. ನಿ.ಪಿ.8 ರಿಂದ ನಿ.ಪಿ.11 ನಾನು ಈ ದಾವೆಗೆಂದು ಸೃಷ್ಟಿ ಮಾಡಿರುವ ಕೋಟಾ ದಾಖಲೆ ಎಂದರೆ ಸರಿಯಲ್ಲ.

14. ನಾನು ನ್ಯಾಯಾಲಯದ ಮುಂದೆ ಸುಳ್ಳು ಮಧ್ಯಂತರ ಅರ್ಜಿಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ವಾದಿ ನಾಗರಾಜ್ ಗೂ ನನಗೂ ಯಾವುದೇ ಕಾನೂನು ಬದ್ಧ ವಾರಸುದಾರರ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಮೃತ ವಾದಿ ನಾಗರಾಜ್‌ನ ಆಸ್ತಿ ಪ್ರತಿವಾದಿಗಳಿಗೆ ಸೇರುತ್ತದೆ ಎಂಬ ದುರುದ್ದೇಶದಿಂದ ನಾನು ಸುಳ್ಳು ಮಧ್ಯಂತರ ಅರ್ಜಿಗಳನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಮೃತ ವಾದಿ ನಾಗರಾಜ್ ನ ತಂದೆ , 2 ನೇ ಪ್ರತಿವಾದಿ ಮೃತ ವಾದಿ ನಾಗರಾಜ್ ನ ಅಕ್ಕ , ಹಾಗೂ 3 ನೇ ಪ್ರತಿವಾದಿ ಮೃತ ವಾದಿ ನಾಗರಾಜ್ ನ ತಂಗಿ ಎಂದರೆ ಸರಿ. ಪ್ರತಿವಾದಿ 2 ಮತ್ತು 3 ಈಗ ನ್ಯಾಯಾಲಯದಲ್ಲಿ ಇದ್ದಾರೆ ಎಂದರೆ ಸರಿ. ಮೃತ ವಾದಿ ನಾಗರಾಜ್ ನ ಆಸ್ತಿ ಪ್ರತಿವಾದಿಗಳಿಗೆ ಸೇರುತ್ತದೆ ಎಂಬ ದುರುದ್ದೇಶದಿಂದ ನಾನು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಗುಬ್ಬಿ.

**ಪಿ.ಡಬ್ಲ್ಯೂ.2.** **ಅಸಲು ದಾವಾ ಸಂಖ್ಯೆ. 165/2014**